## ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 91 ಗ್ರಾಪಂಅ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 04-04-2017

**ಇವರಿಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
**ಬೆಂಗಳೂರು.**

**ಇವರಿಗೆ:**

ಶ್ರೀ ಪಿ.ವೆಂಕಟೇಶ್ ನಾಯಕ್,
ಇನ್‌ಪೋಸಿಸ್ ಲಿಮಿಟೆಡ್,
ನಂ. 44, ಇನ್‌ಪೋಸಿಸ್ ಅವೆನ್ಯೂ ಎಲೆಕ್ಟ್ರಾನಿಕ್ ಸಿಟಿ,
ಹೊಸೂರು ರಸ್ತೆ, ಬೆಂಗಳೂರು-560 100.

ಮಾನ್ಯರೆ,

**ವಿಷಯ:** ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 204 ಮತ್ತು 205 ರ ಸ್ಪಷ್ಟೀಕರಣದ ಬಗ್ಗೆ.

**ಉಲ್ಲೇಖ:** ತಮ್ಮ ಮನವಿ ದಿನಾಂಕ:12-01-2017

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ತಮ್ಮ ಮನವಿಯಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 204 ಮತ್ತು 205 ರ ಸ್ಪಷ್ಟೀಕರಣ ನೀಡುವಂತೆ ಕೋರಿರುತ್ತೀರಿ. ತಮ್ಮ ಮನವಿಯನ್ನು ಪರಿಶೀಲಿಸಿದ್ದು, ಪ್ರಕರಣ 204 ಮತ್ತು 205 ಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಸ್ಪಷ್ಟೀಕರಣ ನೀಡಿದೆ.

1) ಪ್ರಕರಣ 204 ರಲ್ಲಿ ಸರ್ಕಾರವು ಸ್ಥಳೀಯ ಉಪಕರ ಮುಂತಾದವುಗಳನ್ನು ವಿಧಿಸಲು ಅವಕಾಶವಿದೆ. ಗ್ರಾಮ ಪಂಚಾಯತಿಗಳು ಭೂಮಿ ಮತ್ತು ಕಟ್ಟಡಗಳ ಮೇಲೆ ಸಂಗ್ರಹಿಸುವ ತೆರಿಗೆ ಮೊತ್ತದ ಮೇಲೆ ಈ ಕೆಳಕಂಡ 4 ಉಪಕರಗಳನ್ನು (Cess) ವಿಧಿಸಲು ಅವಕಾಶ ಕಲ್ಪಿಸಿದೆ.

| | | |
|---|---|---|
| 1) ಶಿಕ್ಷಣ ಉಪಕರ | - | ಶೇ. 10 |
| 2) ಆರೋಗ್ಯ ಉಪಕರ | - | ಶೇ. 15 |
| 3) ಗ್ರಂಥಾಲಯ ಉಪಕರ | - | ಶೇ. 06 |
| 4) ಭಿಕ್ಷುಕರ ಕರ | - | ಶೇ. 03 |
| **ಒಟ್ಟು** | | **ಶೇ. 34** |

2) ಪ್ರಕರಣ 205 ರಲ್ಲಿ ಸ್ತಿರ ಸ್ವತ್ತುಗಳ ವರ್ಗಾವಣೆಯ ಮೇಲೆ ಶುಲ್ಕ ವಿಧಿಸಲು ಅವಕಾಶ ಕಲ್ಪಿಸಲಾಗಿದೆ. ಸರ್ಕಾರವು ತಾಲ್ಲೂಕು ಪಂಚಾಯಿತಿ ಪ್ರದೇಶದ ಪರಿಮಿತಿಗಳೊಳಗೆ ಇರುವ ಸ್ಥಿರ ಸ್ವತ್ತಿನ ಮಾರಾಟ, ದಾನ, ಅಡಮಾನ, ವಿನಿಮಯ ಮತ್ತು ಗುತ್ತಿಗೆಯ ಲಿಖಿತ ಪತ್ರದ ಮೇಲೆ ಕರ್ನಾಟಕ ಸ್ಟಾಂಪು ಅಧಿನಿಯಮ 1957ರ ಮೂಲಕ ವಿಧಿಸಲಾದ ಶುಲ್ಕದಲ್ಲಿ ಶೇಕಡಾ ಮೂರರಷ್ಟು ದರದಲ್ಲಿ ವಿಧಿಸಬಹುದಾಗಿದೆ. ಈ ಶುಲ್ಕವನ್ನು ಉಪನೊಂದಣಾಧಿಕಾರಿಗಳು ವಿಧಿಸಿ, ಜಿಲ್ಲಾ ರಿಜಿಸ್ಟ್ರಾರ್‌ರಿಗೆ ಕಳುಹಿಸುವರು. ತದನಂತರ ಜಿಲ್ಲಾ ರಿಜಿಸ್ಟ್ರಾರರು ನೊಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರಿಗೆ ಕಳುಹಿಸುವರು. ನೊಂದಣಿ ಮತ್ತು ಮುದ್ರಾಂಕಗಳ ಮಹಾಪರಿವೀಕ್ಷಕರು ಹೀಗೆ ವಸೂಲು ಮಾಡಲಾದ ಪೂರ್ಣ ಮೊತ್ತವನ್ನು ಆಯಾ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆಗೆ ಅನುಗುಣವಾಗಿ ರಾಜ್ಯದಲ್ಲಿನ ತಾಲ್ಲೂಕು ಪಂಚಾಯತಿಗಳಿಗೆ ವರ್ಗಾಯಿಸುವರು. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಹೆಚ್ಚುವರಿ ಸ್ಟಾಂಪ್ ಶುಲ್ಕದ ಸಂಗ್ರಹಣೆ) ನಿಯಮಗಳು, 1994 ಅನ್ನು ರಚಿಸಲಾಗಿದೆ. ಈ ಶುಲ್ಕವನ್ನು ವಸೂಲಿ ಮಾಡಲು ಗ್ರಾಮ ಪಂಚಾಯತಿಗಳಿಗೆ ಅಧಿಕಾರವಿರುವುದಿಲ್ಲ.

ತಮ್ಮ ವಿಶ್ವಾಸಿ,

(ಎಂ.ಕೆ. ಕೆಂಪೇಗೌಡ)
ನಿರ್ದೇಶಕರು(ಪಂ.ರಾಜ್-1) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿ: ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ**

1) ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳು,
2) ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್‌ಗಳು.
3) ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರು/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.

[illegible]